**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**

**ಎಸ್.ಸಿ. ನಂಃ 10015/2019**

**ಚಾಸಾ ಃ 11**

**ಪ್ರಾಸಾ ಃ 03**

| | | |
|---|---|---|
| **ಹೆಸರು** | **ಃ** | **ಮಂಜುನಾಥ್ ಕೆ ಪಿ** |
| **ತಂದೆಯ ಹೆಸರು** | **ಃ** | **ಲೇಟ್ ಪಿಳ್ಳಪ್ಪ** |
| **ವಯಸ್ಸು** | **ಃ** | **41 ವರ್ಷ** |
| **ವೃತ್ತಿ** | **ಃ** | **ಆಟೋ ಚಾಲಕ** |
| **ವಾಸ** | **ಃ** | **ದೇವರಾಜನಗರ, ದೊಡ್ಡಬಳ್ಳಾಪುರ** |

**ಈ ದಿನ ದಿನಾಂಕಃ 06.08.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ**

1. ಈಗ ನೋಡಿದ ಅಮಾನತ್ತು ಪಂಚನಾಮೆಯಲ್ಲಿ ನನ್ನ ಸಹಿ ಇದೆ. ಮಹಜರನ್ನು ನಿಪಿ19 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ-19ಎ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ದಿಃ 08.01.2019 ರಂದು ದೊಡ್ಡಬಳ್ಳಾಪುರ ಗ್ರಾಮಾಂತರ ಪೋಲೀಸು ಠಾಣೆಗೆ ನನ್ನನ್ನು ಗಂಗಾಧರ್ ರವರ ಕೊಲೆಯ ವಿಚಾರದಲ್ಲಿ ಕರೆಸಿದ್ದರು. ಮೃತನ ರಕ್ತ ತಾಗಿದ ಬಟ್ಟೆಗಳು ಮತ್ತು ಕಾರದಪುಡಿ ಇವುಗಳನ್ನು ಅಮಾನತ್ತು ಪಡಿಸಿಕೊಂಡು ಬರೆದ ನಿಪಿ19 ಮಹಜರಿಗೆ ನಾನು ಸಹಿ ಮಾಡಿದ್ದೆ. ಆ ಬಟ್ಟೆಗಳು ಮತ್ತು ಕಾರದ ಪುಡಿ ಪೊಟ್ಟಣವನ್ನು ನೋಡಿದರೆ ಗುರುತಿಸುತ್ತೇನೆ. ಬಟ್ಟೆಗಳು ಈಗ ನನಗೆ ತೋರಿಸಿದ ಮು.ಮಾ 3 ರಿಂದ 6 ಆಗಿರುತ್ತವೆ. ಕಾರದ ಪುಡಿ ಇರುವ ಪ್ಲಾಸ್ಟಿಕ್ ಡಬ್ಬಿ ಈ ದಿನ ಸಾಕ್ಷಿದಾರರು ಗುರುತಿಸಿದು ಅದನ್ನು ಮು.ಮಾ 7 ಎಂದು ಗುರುತಿಸಲಾಯಿತು. ಮು.ಮಾ 3 ರಿಂದ 7 ಇವುಗಳ ಮೇಲೆ ಅಂಟಿಸಿರುವ ಬಿಳಿ ಚೀಟಿಗಳ ಮೇಲೆ ನನ್ನ ಸಹಿಗಳು ಇವೆ. ಸದರಿ ಮಹಜರಿಗೆ ನಾನು ಮತ್ತು ಚಾಸಾ12 ಸಹಿಗಳನ್ನು ಮಾಡಿದ್ದೆವು. ಮಹಜರನ್ನು ಸಂಜೆ 5.00 ರಿಂದ 6.00 ಗಂಟೆಯವರೆಗೆ ಜರುಗಿಸಲಾಗಿತ್ತು.

**ಪಾಟೀ ಸವಾಲು ಆರೋಪಿ ಪರ ವಕೀಲರವರಿಂದ :**

2. ನಾನು ಮತ್ತು ಚಾಸಾ-1 ಸ್ನೇಹಿತರು ಎಂದರೆ ಸರಿ. ಪೋಲೀಸು ಠಾಣೆಗೆ ಬರಬೇಕು ಎಂದು ಲಿಖಿತವಾಗಿ ನೋಟೀಸು ಕೊಟ್ಟಿರಲಿಲ್ಲ. ಆ ದಿನ ಚಾಸಾ 1 ರವರು ನಮ್ಮನ್ನು ಠಾಣೆಗೆ ಕರೆದುಕೊಂಡು ಹೋಗಿದ್ದರು ಎಂದರೆ ಸರಿ. ಮಹಜರ್ ಕ್ರಮ ಜರುಗಿಸಿದಾಗ ಪೋಟೋಗಳನ್ನು ತೆಗೆದಿರಲಿಲ್ಲ. ನಾನು ಆ ದಿನ ಪೋಲೀಸು ಠಾಣೆಗೆ ಹೋಗಿರಲಿಲ್ಲ ಮತ್ತು ಪೋಲೀಸರು ಯಾವುದೇ ಮಹಜರ್ ಕ್ರಮ ಜರುಗಿಸಿರಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ :**

ಇಲ್ಲ

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ

**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**

**ಎಸ್.ಸಿ. ನಂಃ 10015/2019**

**ಚಾಸಾ ಃ 03**

**ಪ್ರಾಸಾ ಃ 02**

| | | |
|---|---|---|
| **ಹೆಸರು** | **ಃ** | **ಬಾಲಕೃಷ್ಣ** |
| **ತಂದೆಯ ಹೆಸರು** | **ಃ** | **ಸುಬ್ರಮಣಿ ಕೆ ಜಿ** |
| **ವಯಸ್ಸು** | **ಃ** | **33 ವರ್ಷ** |
| **ವೃತ್ತಿ** | **ಃ** | **ಮಗ್ಗ ನೇಯುವುದು** |
| **ವಾಸ** | **ಃ** | **ದೇವರಾಜನಗರ, ದೊಡ್ಡಬಳ್ಳಾಪುರ** |

**ಈ ದಿನ ದಿನಾಂಕಃ 06.08.2021 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರವರಿಂದ ಃ**

1. ಈಗ ನೋಡಿದ ನಿಪಿ-2 ಪಂಚನಾಮೆಯಲ್ಲಿ ನನ್ನ ಸಹಿ ಇದೆ ಸಾಕ್ಷಿದಾರರ ಸಹಿಯನ್ನು ನಿಪಿ-2ಬಿ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 2019 ನೇ ಜನವರಿ ಯಲ್ಲಿ ಕೊಂಗಾಡಿಯಪ್ಪ ಕಾಲೇಜು ಬಳಿ ಇರುವ ಪ್ರೀತಿ ವೈನ್ಸ್ ಸರ್ಕಲ್ ಬಳಿ ಪೋಲೀಸರು ಮಹಜರ್ ಮಾಡಿದಾರ ಆ ಸಹಿಯನ್ನು ಮಾಡಿದ್ದೆ. ಆ ಸಮಯ ಚಾಸಾ-1 ಮತ್ತು ಚಾಸಾ4 ಸಹ ಅಲ್ಲಿದ್ದು ಸಹಿಗಳನ್ನು ಮಾಡಿದ್ದರು. ಗಂಗಾಧರ್‌ರವರ ಕೊಲೆ ವಿಚಾರದಲ್ಲಿ ಆ ಮಹಜರ್ ಮಾಡಿದ್ದು ಆ ಜಾಗವನ್ನು ಪೋಲೀಸರಿಗೆ ಚಾಸಾ1 ರವರು ತೋರಿಸಿದ್ದರು. ಘಟನಾ ಸ್ಥಳದದಿಂದ ಪೋಲೀಸರು ಜಲ್ಲಿ ಕಲ್ಲುಗಳು ಮತ್ತು ಮಣ್ಣು ಹಾಗೂ ಸ್ಯಾಂಪಲ್ ಮಣ್ಣನ್ನು ಆ ಸಮಯ ತೆಗೆದುಕೊಂಡರು. ಅವುಗಳನ್ನು ಪ್ಲಾಸ್ಟಿಕ್ ಡಬ್ಬಗಳಿಗೆ ಹಾಕಿ ಮೊಹರು ಮಾಡಿ ಅವುಗಳ ಮೇಲೆ ನಮ್ಮ ಸಹಿಗಳುಳ್ಳ ಚೀಟಿಗಳನ್ನು ಅಂಟಿಸಿದ್ದರು. ಆ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಅವುಗಳು ಈಗ ನನಗೆ ತೋರಿಸಿದ ಮು.ಮಾ 1 ಮತ್ತು 2 ಆಗಿರುತ್ತವೆ. ಆ ಸಮಯ ಪೋಲೀಸರು ಪೋಟೋಗಳನ್ನು ಸಹ ತೆಗೆದಿದ್ದು ಅವುಗಳು ನಿಪಿ3 ಮತ್ತು 4 ರಂತೆ ಇವೆ. ಷಟರ್ ಬಾಗಿಲು ಹಾಗೂ ಗೋಡೆಯ ಮೇಲೆ

ರಕ್ತದ ಕಲೆಗಳು ಬಿದ್ದಿರುವುದು ನಿಪಿ4 ಫೋಟೋದಲ್ಲಿ ಕಾಣುತ್ತದೆ. ನಿಪಿ3 ಫೋಟೋದಲ್ಲಿ ನಾನು, ಚಾಸಾ1 ಮತ್ತು 4 ಪೋಲೀಸರ ಜೊತೆ ಇರುವುದು ಕಾಣುತ್ತದೆ. ಮಹಜರ್ ಕ್ರಮವನ್ನು ಬೆಳಗ್ಗೆ 9.00 ರಿಂದ 10.00 ಗಂಟೆಯವರೆಗೂ ಜರುಗಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ವಕೀಲರವರಿಂದ :**

2. ನಾನು ಮತ್ತು ಚಾಸಾ 1 ಸ್ನೇಹಿತರು ಎಂದರೆ ಸರಿ. ಈ ದಿನ ನ್ಯಾಯಾಲಯಕ್ಕೆ ಚಾಸಾ 1 ಸಹ ನನ್ನ ಜೊತೆ ಬಂದಿದ್ದಾರೆ ಎಂದರೆ ಸರಿ. ಮಹಜರ್ ಕ್ರಮ ಜರುಗಿಸಿದ ದಿ ನಾಂಕ ನನಗೆ ನಿಖರವಾಗಿ ನೆನಪಿಲ್ಲ. ಮಹಜರ್ ಮಾಡಿದ ಸ್ಥಳಕ್ಕೆ ಹೋಗುವ ಮೊದಲು ನಾನು ಮನೆಯಲ್ಲಿದ್ದೆ. ಇಂತಹ ಜಾಗಕ್ಕೆ ಬರಬೇಕು ಎಂದು ಪೋಲೀಸರು ನನಗೆ ಲಿಖಿತವಾಗಿ ನೋಟೀಸು ಕೊಟ್ಟರಲಿಲ್ಲ. ಮಹಜರ್‌ಗೆ ಸಹಿ ಮಾಡಬೇಕೆಂದು ನನ್ನನ್ನು ಚಾಸಾ 1 ಆ ಸ್ಥಳಕ್ಕೆ ಕರೆದುಕೊಂಡು ಹೋದರು ಎಂದರ ಸರಿ. ನಾನು ಮಹಜರಿಗೆ ಪೋಲೀಸು ಠಾಣೆಗೆ ಸಹಿ ಮಾಡಿದ್ದೆ ಎಂದರೆ ಸರಿಯಲ್ಲ. ಮಹಜರ್ ಟೈಪ ಮಡುವಾಗ ಅಥವಾ ಪ್ರಿಂಟ್ ಔಟ್ ತೆಗೆಯುವಾಗ ನಮ್ಮನ್ನು ನಿಲ್ಲಿಸಿ ಪೋಟೋ ತೆಗೆದಿರಲಿಲ್ಲ. ಮಹಜರ್ ಬೆಳರಳಚ್ಚು ಮಾಡಿದ ಪೋಲೀಸರ ಹೆಸರು ನನಗೆ ಗೊತ್ತಿಲ್ಲ.

3. ಗಂಗಾಧರ್‌ರವರ ಕೊಲೆ ವಿಚಾರಕ್ಕೆ ಸಂಬಂಧಪಟ್ಟಂತೆ ನಾನು ಯಾವತ್ತೂ ಪೋಲೀಸು ಠಾಣೆಗೆ ಹೋಗಿಲ್ಲ. ಮು.ಮಾ 1 ಮತ್ತು 2 ರ ಮೇಲೆ ಅಂಟಿಸಿರುವ ಚೀಟಿಗಳ ಮೇಲೆ ನನ್ನ ತಂದೆಯ ಹೆಸರನ್ನು ನಮೂದಿಸಿಲ್ಲ. ಆ ದಿನ ಪೋಲೀಸರು ಯಾವುದೇ ಮಹಜರ ಮಾಡಿರಲಿಲ್ಲ ಹಾಗೂ ನಾನು ಚಾಸಾ 1 ರವರ ಮಾತನ್ನು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ :** ಇಲ್ಲ

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ